ಲೋಕೋಪಯೋಗಿ ವಿಭಾಗಗಳಿಗೆ ಆ ವಿಭಾಗಗಳಲ್ಲಿ ಬರುವ ರಸ್ತೆಯ ಉದ್ದದ ಪ್ರಮಾಣದಲ್ಲಿ ಹಂಚಲಾಗಿರುವುದು. ಹೀಗೆ ಹಂಚಿದ ಪ್ರತಿ ವಿಭಾಗದಲ್ಲೂ ಶೇಕಡಾ 35ರಷ್ಟನ್ನು ಆಯಾ ವಿಭಾಗಗಳಲ್ಲಿ ಬರುವ ರಸ್ತೆಗಳಿಗೆ ಸಮಭಾಗವಾಗಿ ವಾರ್ಷಿಕ ದುರಸ್ತಿಗಾಗಿ ಹಂಚಲಾಗುವುದು.

ವಿಭಾಗಕ್ಕೆ ನೀಡುವ ಅನುದಾನದಲ್ಲಿ ಶೇಕಡ 50ರಷ್ಟನ್ನು ನಿಯತ ನವೀಕರಣ ಕಾಮಗಾರಿಗಳಿಗಾಗಿ ಆಯಾ ವಿಭಾಗಗಳಲ್ಲಿ ಅತಿ ಅವಶ್ಯವಾದ ಭಾಗಗಳನ್ನು ಗುರುತಿಸಿ, ಕೆಲಸಗಳನ್ನು ತೆಗೆದುಕೊಳ್ಳಲಾಗುವುದು. ಇದಕ್ಕಾಗಿ, ವಿಭಾಗಾಧಿಕಾರಿಗಳು (ಕಾ. ಇಂ) ಕಾರ್ಯಕ್ರಮವನ್ನು ಅಧೀಕ್ಷಕ ಇಂಜಿನಿಯರ್‌ರವರಿಂದ ಅನುಮೋದಿಸಿಕೊಳ್ಳ ಬೇಕಾಗುತ್ತದೆ. ಉಳಿದ ಶೇಕಡಾ 15ರಷ್ಟನ್ನು ಅತಿವೃಷ್ಟಿಯಿಂದ ಹಾಳಾದ ರಸ್ತೆ ರಿಪೇರಿ, ತಿರುವನ್ನು ಅಭಿವೃದ್ಧಿಪಡಿಸುವಂತೆ ಇತ್ಯಾದಿ ಕೆಲಸಗಳಿಗಾಗಿ ಅವಶ್ಯಕತೆಗೆ ಅನುಸಾರವಾಗಿ ಮಾಡಲಾಗುವುದು.

ಆ) ಪ್ರತಿ ಸಾಲಿನಲ್ಲೂ ಸಾಮಾನ್ಯವಾಗಿ ಪರಿಷ್ಕರಿಸಲಾಗುವುದು. ಉದಾಹರಣೆಗೆ: ರಾಜ್ಯದ ಎಲ್ಲಾ ರಸ್ತೆಗಳ ನಿರ್ವಹಣಾ ಅನುದಾನ 1997-98ನೇ ಸಾಲಿನಲ್ಲಿ 145.00 ಕೋಟಿ ರೂ.ಗಳಾಗಿದ್ದು, 1998-99ನೇ ಸಾಲಿನಲ್ಲಿ 170 ಕೋಟಿ ರೂ.ಗಳನ್ನು ಪರಿಷ್ಕರಿಸಲ್ಪಟ್ಟಿದೆ.

ವಿಷಯ: ಉತ್ತರಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಫಾರೆಸ್ಟರ್ ಹುದ್ದೆಗಳ ಭರ್ತಿ.

1184 (1674)

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಫಾರೆಸ್ಟರ್ ಹುದ್ದೆಗಳು ಎಷ್ಟು ಹಾಗೂ ಗಾರ್ಡುಗಳ ಹುದ್ದೆ ಎಷ್ಟು (ವಿವರ ನೀಡುವುದು)

ಆ) ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದರಿಂದ ಅತೀ ಹೆಚ್ಚಿನ ಮಟ್ಟದಲ್ಲಿ ಅರಣ್ಯ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ವನಪಾಲಕರ ಹಾಗೂ ಅರಣ್ಯ

ರಕ್ಷಕರ ಹುದ್ದೆಗಳು ಕೆಳಕಂಡಂತಿದೆ.

ವನಪಾಲಕರು - 49

ಅರಣ್ಯ ರಕ್ಷಕರು - 142

ಆ) ಇಲ್ಲ.

ಇ) ಈ ಖಾಲಿ ಹುದ್ದೆಗಳನ್ನು ಸರ್ಕಾರದ ಮಿತವ್ಯಯ ಆದೇಶವನ್ನು ಸಡಿಲಿಸಿ ತುಂಬಲು ಪರಿಶೀಲಿಸಲಾಗುತ್ತಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 100 ಎಸ್‌ಸಿಎ 92 (ಭಾಗ-2), ದಿನಾಂಕ 1-4-98ರ ಪ್ರಕಾರ ಅನುಕಂಪದ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಅರಣ್ಯ ರಕ್ಷಕರ ಹುದ್ದೆಗೂ ನೇಮಕಾತಿ ಮಾಡಬಹುದಾಗಿದೆ. ಅದರ ಪ್ರಕಾರ ಅನುಕಂಪದ ಆಧಾರದ ಮೇಲೆ ಉದ್ಯೋಗಕ್ಕೆ ಅರ್ಹರಿರುವ ಸುಮಾರು 70 ಅಭ್ಯರ್ಥಿಗಳನ್ನು ಅರಣ್ಯ ರಕ್ಷಕರ ತರಪೇತಿಯ ನಂತರ ಅರಣ್ಯ ರಕ್ಷಕರನ್ನಾಗಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಇವರಲ್ಲಿ ಸುಮಾರು 15 ಅಭ್ಯರ್ಥಿಗಳನ್ನು ಉತ್ತರ ಕನ್ನಡ ಜಿಲ್ಲೆಗೆ ನೇಮಕ ಮಾಡಲಾಗುವುದು. ಉಳಿದ ವನಪಾಲಕರು ಹಾಗೂ ಅರಣ್ಯ ರಕ್ಷಕರ ಹುದ್ದೆಗಳನ್ನು ಮಿತವ್ಯಯ ಆದೇಶವನ್ನು ಸಡಿಲಿಸಿದ ನಂತರ ತುಂಬಲಾಗುವುದು.

ವಿಷಯ: ಉತ್ತರಕನ್ನಡ ಜಿಲ್ಲೆಯಲ್ಲಿ ಅರಣ್ಯ ಬೆಂಕಿ ದುರಂತಗಳು

1185 (1675)

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ವಯೆಯಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯಲ್ಲಿ ಬೆಂಕಿ ದುರಂತಗಳಿಗೆ ತೆಗೆದಿರಿಸಿದ ಮೊತ್ತ ಎಷ್ಟು? ಹಾಗೂ ಖರ್ಚಾದ ಮೊತ್ತವೆಷ್ಟು?

ಆ) ಉತ್ತರಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಇಲಾಖೆಯಿಂದ ಬಂದ ಆದಾಯ ಎಷ್ಟು? (ವರ್ಷಾವಾರು ವಿವರ ನೀಡುವುದು)

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):